ಕ್ರ ಸಂ.	ಯೋಜನೆಯ ಹೆಸರು	ಯೋಜನೆಯ ರೂಪುರೇಷೆಗಳು
9	ಹೊಸ ಕೃಷಿ ಪ್ರೋತ್ಸಾಹ ಯೋಜನೆಯ ಕೃಷಿ ಯಾಂತ್ರೀಕರಣ ಯೋಜನೆ 2401-00-800-1-44	ಶೇ. 50 ಸಹಾಯಧನದಲ್ಲಿ ಪವರ್ ಟಿಲ್ಲರ್, ಸಣ್ಣ ಟ್ರಾಕ್ಟರ್, ಹೈಟೆಕ್ ಕೃಷಿ ಯಂತ್ರೋಪಕರಣ ಮತ್ತು ನವೀನ ಕೃಷಿ ಯಂತ್ರೋಪಕರಣಗಳ ವಿತರಣೆ
10	ಸಾವಯವ ಕೃಷಿ ಮಿಷನ್ ಯೋಜನೆ 2401-00-800-1-43	ಮಂಗಳೂರು ತಾಲ್ಲೂಕಿನಲ್ಲಿ ಶ್ರೀ ಪಲ್ಗುಣಿ ಸಾವಯವ ಕೃಷಿ ಪರಿವಾರ ಸಂಘ (ರಿ), ಪಡುಕೊಣಾಜೆ – ಇವರ ಮುಖಾಂತರ ಸಾವಯವ ಕೃಷಿ ಬೇಸಾಯಕ್ಕೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ರೈತರಿಗೆ ಪ್ರೋತ್ಸಾಹಕರವಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

908 ಶ್ರೀ ಡೆರಿಕ್ ಎಂ.ಬಿ. ಫುಲ್ ಇನ್ ಫಾ: ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ನಿಯಂತ್ರಣವಿಲ್ಲದ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಧಕ್ಕೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರವು ಪ್ಲಾಸ್ಟಿಕ್ ಬಳಕೆಯನ್ನು ನಿಷೇಧ ಮಾಡಲು ಪರಿಗಣಿಸುವುದೇ;

ಇ) ಯಾವಾಗ ಈ ನಿಷೇಧ ಜಾರಿಗೆ ಬರುವುದು;

ಈ) ಸಂಪೂರ್ಣ ಪ್ಲಾಸ್ಟಿಕ್ ನಿಷೇಧದಿಂದ ಪರಿಸರ ಮಾಲಿನ್ಯವನ್ನು ತಡೆಗಟ್ಟಬಹುದು ಎಂಬ ಅಂಶವು ಸರ್ಕಾರಕ್ಕೆ ತಿಳಿದಿದೆಯೇ;

ಉ) ಬೆಂಗಳೂರು ಹಾಗೂ ಇತರೆ ಜಿಲ್ಲೆಗಳಲ್ಲಿ ಪ್ಲಾಸ್ಟಿಕ್ ನಿಯಂತ್ರಣಕ್ಕೆ ಸರ್ಕಾರವು ಯಾವ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದು?

ಶ್ರೀ ಜೆ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):

ಅ) ಹೌದು.

ಆ) ಸಂಪೂರ್ಣವಾಗಿ ನಿಷೇಧಿಸಲು ಪರಿಗಣಿಸಿರುವುದಿಲ್ಲ. ರಾಜ್ಯದಲ್ಲಿ 20 ಮೈಕಾನ್‌ಗಳಿಗಿಂತಲೂ ದಪ್ಪವಾದ ಪ್ಲಾಸ್ಟಿಕ್ ಚೀಲಗಳನ್ನು ಮಾತ್ರ ಉತ್ಪಾದಿಸಲು ಅನುಮತಿ ನೀಡಲಾಗಿದೆ.

ಇ) ಅನ್ವಯಿಸುವುದಿಲ್ಲ.

ಈ) ಹೌದು. ಆದರೆ ಸದ್ಯಕ್ಕೆ ಸಂಪೂರ್ಣ ಪ್ಲಾಸ್ಟಿಕ್ ನಿಷೇಧವು ಸಾಧ್ಯವಿರುವುದಿಲ್ಲ. ಬಹುತೇಕ ಗೃಹೋಪಯೋಗಿ ವಸ್ತುಗಳು, ವಿದ್ಯುತ್ ಉಪಕರಣಗಳು, ಎಲೆಕ್ಟ್ರಾನಿಕ್ ಉಪಕರಣಗಳು, ವಾಹನಗಳ ಬಿಡಿಭಾಗಗಳು, ಕಛೇರಿ ಮತ್ತು ಮನೆಗಳಲ್ಲಿ ಉಪಯೋಗಿಸುವ ಬಹಳ ವಸ್ತುಗಳು ಪ್ಲಾಸ್ಟಿಕ್ ವಸ್ತುಗಳಿಂದ ತಯಾರಾಗುವುದರಿಂದ ಹಾಗೂ ಅನ್ಯ ಸಮರ್ಪಕ ಪರ್ಯಾಯ ವಸ್ತುಗಳಿಲ್ಲದಿರುವುದರಿಂದ ಸಂಪೂರ್ಣ ಪ್ಲಾಸ್ಟಿಕ್ ನಿಷೇಧವು ಪ್ರಸ್ತುತ ಸಾಧ್ಯವಿರುವುದಿಲ್ಲ. ಪ್ಲಾಸ್ಟಿಕ್ ಕೈ ಚೀಲ ಹಾಗೂ ಇನ್ನಿತರ ಪ್ಲಾಸ್ಟಿಕ್ ವಸ್ತುಗಳ ನಿಕೃಷ್ಟ ವಿಲೇ ಹವ್ಯಾಸಗಳು ಮತ್ತು ಅವೈಜ್ಞಾನಿಕವಾಗಿ ವಿಲೇ ಮಾಡುವುದರಿಂದ ಹೆಚ್ಚಿನ ಪರಿಸರ ಹಾನಿಯಾಗುತ್ತಿದೆ.

ಉ) ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್, ರಾಷ್ಟ್ರೀಯ ಉದ್ಯಾನವನಗಳು ಮತ್ತು ಅಭಯಾರಣ್ಯಗಳು, ಜಂಗಲ್

ಲಾಡ್ಜ್‌ಸ್ ಮತ್ತು ರಿಸಾರ್ಟ್‌ಗಳು, ಮೈಸೂರು ಮೃಗಾಲಯ ಮತ್ತು ಪಾರಿಸಾರಿಕೆ ಪ್ರವಾಸೀ ಕೇಂದ್ರಗಳಂತಹ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ಬ್ಯಾಗ್‌ಗಳ ಬಳಕೆಯನ್ನು ನಿಷೇಧಿಸಲಾಗಿದೆ.

2. ರಾಜ್ಯದಲ್ಲಿ 20 ಮೈಕ್ರಾನ್‌ಗಿಂತ ದಪ್ಪನಾದ ಪ್ಲಾಸ್ಟಿಕ್ ಉತ್ಪಾದನೆಗೆ ಮಾತ್ರ ಅನುಮತಿಸಲಾಗಿದೆ.

3. ತೆಳುವಾದ ಪ್ಲಾಸ್ಟಿಕ್ ಹಾಳೆಗಳ ಮೇಲೆ ಚುನಾವಣಾ ಮತ್ತಿತರ ಬಿತ್ತಿಪತ್ರಗಳನ್ನು ಮುದ್ರಿಸುವುದನ್ನು ನಿಷೇಧಿಸಲಾಗಿದೆ.

4. ಪ್ಲಾಸ್ಟಿಕ್ ತ್ಯಾಜ್ಯಗಳ ಸಮರ್ಪಕ ವಿಲೇವಾರಿ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ನಿರಂತರವಾಗಿ ಅರಿವು ಮೂಡಿಸುವ ಪ್ರಯತ್ನ ನಡೆಸಲಾಗುತ್ತಿದೆ.

5. ಪ್ಲಾಸ್ಟಿಕ್ ತ್ಯಾಜ್ಯವನ್ನು ರಸ್ತೆ ನಿರ್ಮಾಣದ ಕಾಮಗಾರಿಯಲ್ಲಿ ಆಸ್ಫಾಲ್ಟ್ ಜೊತೆ ಬಳಕೆಗೆ ಪ್ರೋತ್ಸಾಹಿಸಲಾಗುತ್ತಿದೆ.

6. ಜೈವಿಕವಾಗಿ ಅಳಿಯುವ ಪ್ಲಾಸ್ಟಿಕ್ ಬಳಕೆಗೆ ಸಂಬಂಧಿಸಿದಂತೆ ಶಾಸನ ರಚನೆಗೆ ಯೋಜಿಸಲಾಗುತ್ತಿದೆ.